OS 3/2022

ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 11-07-2024

ಪಾಟೀ ಸವಾಲು : 4 ಮತ್ತು 5 ನೇ ಪ್ರತಿವಾದಿ ಪರಃ ಶ್ರೀ ಕೆ ಎಸ್ ಎ ವಕೀಲರಿಂದಃ

ನಿಪಿ-1 ಅನ್ನು ತಯಾರಿಸಲು ವಕೀಲರು ಮಾಹಿತಿಕೊಟ್ಟಿರುತ್ತಾರೆ. ದಿಃ 13-07-2010 ರಂದು ನನ್ನ ಬಳಿ 2,50,000/- ಹಣ ಇತ್ತು ಎಂದು ತೋರಿಸಲು ದಾಖಲೆ ಇಲ್ಲ. ನಿಪಿ-1 ರಲ್ಲಿ ಹೇಳಿರುವ ರಾಜಪುರ ಸಾರಸ್ವತ ಕ್ರೇಡಿಟ್ ಕೋ ಆಪರೇಟಿವ್ ಹಾಗೂ ಸಿಂಡಿಕೇಟ್ ಬ್ಯಾಂಕ್ ನ ಶಾಖೆಗಳಲ್ಲಿ ನನ್ನ ಹೆಸರಿನಲ್ಲಿ ಖಾತೆ ಇತ್ತು. ಸದರಿ ಬ್ಯಾಂಕ್ ಗಳ ಅಕೌಂಟ್ ಸ್ಟೇಟ್ಮೆಂಟ್ ಅನ್ನು ಬ್ಯಾಂಕಿಗೆ ಹಾಜರುಪಡಿಸಬಹುದು. ನಾನು ಕೊಟ್ಟಿದ್ದೇನೆ ಎಂದು ಹೇಳುವ ಹಣ ದೇವೆಂದ್ರ ಕಿಣಿ ಯವರ ಖಾತೆಗೆ ಜಮಾ ಆದ ಬಗ್ಗೆ ದಾಖಲೆ ಕೊಡಬಹುದು. ನಿಪಿ-1 ರಲ್ಲಿ ಹೇಳಿದಂತೆ ಹಣ ಕೊಟ್ಟ ಬಗ್ಗೆ ಪ್ರತ್ಯೇಕ ರಶೀದಿ ಆದ ಬಗ್ಗೆ ನೆನಪಿಲ್ಲ. ನಿಪಿ-1 ರ ಕಂಡಿಕೆ 7 ರಲ್ಲಿ ಹೇಳಿರುವ ಕೆಲಸಗಳ ಖರ್ಚನ್ನು ದೇವೆಂದ್ರ ಕಿಣಿಯವರೇ ಬರಿಸಬೇಕು ಎಂದು ಇದೆಯೇ ಹೊರತು ಅವರೇ ಸ್ವತಃ ಆ ಕೆಲಸಗಳನ್ನು ಮಾಡಬೇಕು ಎಂದು ನಮೂದು ಇರುವುದಿಲ್ಲ.

ದಾಖಲೆ ಆಗಿದೆ ಎಂದು ಹೇಳುವ ದಿನ ಸರಿಯಾದ ಮುದ್ರಾಂಕ ಶುಲ್ಕ ಪಾವತಿಸದೇ ಇದ್ದು ನಿಪಿ-1 ಅಸಿಂಧೂ ಎಂದರೆ ನಾನು ಸಂಪೂರ್ಣ ಶುಲ್ಕ ಪಾವತಿಸಿರುತ್ತೇನೆ. ನಾನು ದಾಖಲೆ ಆಗುವ ದಿನ ಪಾವತಿಸದೇ ನೋಟಿಸು ನೀಡಿದ ನಂತರ ಪಾವತಿಸಿರುತ್ತೇನೆ ಎಂದರೆ ನೆನಪಿಲ್ಲ. ನಿಪಿ-1 ರ ಜೊತೆ ನೊಂದಾಣಿ ಮತ್ತು ಮುಂಧ್ರಾಕ ಇಲಾಖೆಯ ನಡವಳಿಯ ಆದೇಶವನ್ನು ಹಾಜರುಪಡಿಸಿದ್ದು ಅದರಂತೆ ಶುಲ್ಕವನ್ನು ನೋಟಿಸು ನೀಡಿದ ನಂತರ ಪಾವತಿಸಿರುವುದು ಕಂಡು ಬರುತ್ತದೆ

ಎಂದರೆ ಇರಬಹುದು. ನಿಪಿ-1 ರ ಜೊತೆ ಲಗತ್ತಿಸಿದ ನಡಾವಳಿ ಆಗುವ ಸಮಯದಲ್ಲಿ ದೇವೆಂದ್ರ ಕಿಣಿ ಹಾಗೂ ಅವರ ಮಕ್ಕಳಿಗೆ ನಿಪಿ-1 ಕರಾರಿನ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಿಪಿ-1 ದಾಖಲೆ ಆಗುವ ಸಮಯದಲ್ಲಿ ನಿಪಿ-1 ರ ಬಗ್ಗೆ 4 ಹಾಗೂ 5 ನೇ ಪ್ರತಿವಾದಿಗಳಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-2 ದಾಖಲೆ ಕೂಡ 4 ಮತ್ತು 5 ನೇ ಪ್ರತಿವಾದಿಗಳ ಗಮನಕ್ಕೆ ಬಂದಿರುವುದಿಲ್ಲ ಹಾಗೂ ಅದರಲ್ಲಿ ಇರುವುದು ಅವರ ಸಹಿಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-1 ಕ್ಕೆ 3 ನೇ ಪ್ರತಿವಾದಿಯೇ ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ನಿಪಿ-2 ಕ್ಕೆ ನಿಗಧಿತ ಮುಂದ್ರಾಕ ಶುಲ್ಕ ಕೊಡದ ಕಾರಣ ಅದು ಅಸಿಂಧೂ ಎಂದರೆ ನನಗೆ ಗೊತ್ತಾಗುವುದಿಲ್ಲ. ನಿಪಿ-1 ರ ಕರಾರಿನಂತೆ ದೇವೆಂದ್ರ ಕಿಣಿಯವರು ಮೃತಪಟ್ಟ ನಂತರ ನಿಮ್ಮ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ಸೇರಿಸಲು ಏನಾದರೂ ಪ್ರಯತ್ನಪಟ್ಟಿರುತ್ತೀರಾ ಎಂದರೆ ಪಟ್ಟಿರುತ್ತೇನೆ. ದಾವೆ ದಾಖಲಿಸುವ ಪೂರ್ವದಲ್ಲಿ ನಿಪಿ-1 ರ ಆಧಾರದ ಮೇಲೆ ಕ್ರಯಪತ್ರ ಮಾಡಿಕೊಡಲು ಮೌಖಿಕವಾಗಿ ಅಥವಾ ಲಿಖಿತವಾಗಿ ಕೇಳಿರುತ್ತೀರಾ ಎಂದರೆ ನೆನಪಾಗುವುದಿಲ್ಲ.

ನಿಪಿ-4 ನೋಟಿಸು 4 ಹಾಗೂ 5 ನೇ ಪ್ರತಿವಾದಿಗಳಿಗೆ ಜಾರಿ ಆಗಿದೆ ಎಂದು ತೋರಿಸಲು ಅಂಚೆ ಸ್ವೀಕೃತಿ ಪತ್ರ ಹಾಜರುಪಡಿಸಬಹುದಾ ಎಂದರೆ ಕೊಟ್ಟರೆ ಹಾಜರುಡಿಸಬಹುದು. ದಿಃ 04-10-2021 ರಂದು ದೇವೆಂದ್ರ ಕಿಣಿ ಉದ್ಯೋಗ ನಿಮಿತ ಕುಂದಾಪುರದ ದೇರಳಕಟ್ಟೆಯಲ್ಲಿ ವಾಸ ಆಗಿದ್ದರು ಎಂದರೆ ಕಾರ್ಕಳದಲ್ಲಿರುವ ಮನೆಗೆ ಬರುತ್ತಿದ್ದರು. ಆ ಸಮಯದಲ್ಲಿ 5 ನೇ ಪ್ರತಿವಾದಿಗೆ ಮದುವೆಯಾಗಿ ಗಂಡನ ಮನೆಯಲ್ಲಿ ಇದ್ದರು ಎಂದರೆ ಗೊತ್ತಿಲ್ಲ. ಆ ಕಾರಣದಿಂದ ನಿಪಿ-4 ನೋಟಿಸು 4 ಹಾಗೂ 5 ನೇ ಪ್ರತಿವಾದಿಗಳಿಗೆ ಜಾರಿ ಆಗಿರುವುದಿಲ್ಲ ಎಂದರೆ ಜಾರಿ ಆಗಿರುತ್ತದೆ. ದಾವಾ ಆಸ್ತಿಯ 14 ಸೆಂಟ್ಸ ಜಾಗದಲ್ಲಿ ಯಾವುದೇ ಅಂಶ ಭೂಪರಿವರ್ತನೆ ಆಗಿರುವುದಿಲ್ಲ ಎಂದರೆ ಗೊತ್ತಿಲ್ಲ. ಹಾಗಾಗೀ ಭೂಪರಿವರ್ತನೆ ಆದ ಆದೇಶ ನಿಮಗೆ ಕೊಡುವ ಸಂಧರ್ಭ ಇರಲಿಲ್ಲ ಎಂದರೆ

ಸಾಕ್ಷಿಯು ನಿಪಿ-1 ಕರಾರು ಮಾಡುವಾಗ ಭೂಪರಿವರ್ತನ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದರು. ನಿಪಿ-4 ನೋಟಿಸು 3 ಹಾಗೂ 4 ನೇ ಪ್ರತಿವಾದಿಗಳಿಗೆ ಜಾರಿ ಆದ ಕಾರಣ ನಿಪಿ-5 ಅವರ ಮಾಹಿತಿಯ ಮೇರೆಗೆ ನೀಡಿದ ಉತ್ತರ ಅಲ್ಲ ಎಂದರೆ ಸರಿಯಲ್ಲ.

2 ನೇ ವಾದಿ ನನ್ನ ತಂಗಿ. ಅವರು ಮಾಡಿಕೊಟ್ಟಿದ್ದಾರೆ ಎಂದು ಹೇಳುವ ನಿಪಿ-6 ರಲ್ಲಿ ದಾವಾ ಆಸ್ತಿಯ ವಿವರ ಇರುವುದಿಲ್ಲ ಎಂದರೆ ಗೊತ್ತಿಲ್ಲ. ದೇವೇಂದ್ರ ಕಿಣಿಯವರು ನಮ್ಮ ಕುಟುಂಬದವರಲ್ಲ. ಅವರು ಎಲ್ಲಿಯವರೆಗೂ ಓದಿದ್ದರು ಎಂದು ಗೊತ್ತಿಲ್ಲ. ಅವರಿಗೆ ಇಂಗ್ಲೀಷ್ ಭಾಷೆಯ ತಿಳುವಳಿಕೆ ಇತ್ತು. ದೇವೇಂದ್ರ ಕಿಣಿಯವರು ಮಾಡಿಕೊಟ್ಟಿದ್ದಾರೆ ಎಂದು ಹೇಳುವ ನಿಪಿ-7 ರ ವಿವರಗಳು ಇಂಗ್ಲೀಷ್ ನಲ್ಲಿ ಇದ್ದು ಅವರು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-7 ತಯಾರಿಸಲು ವಕೀಲರಿಗೆ ದೇವೇಂದ್ರ ಕಿಣಿಯವರು ಮಾಹಿತಿ ನೀಡಿರುತ್ತಾರೆ. ನಿಪಿ-7 ಅನ್ನು ಯಾವ ಕಾರಣಕ್ಕಾಗಿ ಮಾಡಿಸಿದ್ದು ಗೊತ್ತಿಲ್ಲ. ನಿಪಿ-7 ರಲ್ಲಿ ಬರೆದಿರುವ ವಿವರಗಳು ಸರಿಯಾಗಿರುತ್ತದೆ. ಅದರಲ್ಲಿ ನಿರಪೇಕ್ಷಣಾ ಪತ್ರವನ್ನು ಪಡೆಯಲು ಅಧಿಕಾರಕೊಟ್ಟಿರುತ್ತಾರೆ. ನಿಪಿ-1 ಹಾಗೂ ನಿಪಿ-7 ರಲ್ಲಿ ಕಾಣಿಸಿರುವ ಆಸ್ತಿಗಳು ಒಂದೇ ಆಗಿರುತ್ತದೆ. ನಿಪಿ-7 ರ ಪ್ರಕಾರ ಕೊಟ್ಟಿರುವ ಯಾವೆಲ್ಲಾ ಅಧಿಕಾರಗಳನ್ನು ಉಪಯೋಗಿಸಿರುತ್ತೀರಾ ಎಂದರೆ ಗೊತ್ತಿಲ್ಲ. ನಿಪಿ-1 ರ ಅನುಷ್ಠಾನವನ್ನು ನಿಪಿ-7 ರ ಜಿ ಪಿ ಎ ಮೂಲಕ ಮಾಡುವ ಅಧಿಕಾರ ನನಗೆ ಇತ್ತು. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 3,4,5 ರಲ್ಲಿ ಹೇಳಿರುವ ವಿಚಾರಗಳನ್ನು ನಿಪಿ-7 ರ ಮೂಲಕ ಮಾಡಬಹುದಿತ್ತು ಎಂದರೆ ಗೊತ್ತಿಲ್ಲ.

ದೇವೇಂದ್ರ ಕಿಣಿ ಮೃತಪಡುವವರೆಗೆ ನಿಪಿ-7 ರದ್ದು ಪಡಿಸಿರುವುದಿಲ್ಲ. ನಿಪಿ-7 ರ ವಿಚಾರವನ್ನು ನನ್ನ ವಾದ ಪತ್ರದಲ್ಲಾಗಲೀ, ಮುಖ್ಯ ವಿಚಾರಣೆಯಲ್ಲಾಗಲೀ ಹೇಳದೆ ಇರಲು ಏನೂ ಕಾರಣ ಎಂದರೆ ಗೊತ್ತಿಲ್ಲ. ನಿಪಿ-8 ದೇವೇಂದ್ರ ಕಿಣಿ ಮೃತಪಡುವ ವೆರೆಗೆ ಅವರ ಸ್ವಾಧೀನದಲ್ಲಿ ಇತ್ತು ನಂತರ ಪ್ರತಿವಾದಿಗಳ ಸ್ವಾಧೀನದಲ್ಲಿ ಇತ್ತು

ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಹಾಗೇ ನಿಪಿ-1 ಹಾಗೂ 2 ರ ಆಧಾರದ ಮೇಲೆ ಪ್ರತಿವಾದಿಗಳು ಕ್ರಯಪತ್ರ ಮಾಡಿಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ನಾನು ಕೇಳಿದಂತೆ ನಿವೃತ್ತಿ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಉಳಿದಂತೆ ನಿಪಿ-4 ಮತ್ತು 5 ದಾಖಲೆಗಳನ್ನು ಹೊರತುಪಡಿಸಿ 1 ರಿಂದ 3 ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ